# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 2034 |
| ಉತ್ತರಿಸಬೇಕಾದ ದಿನಾಂಕ | 25.03.2026 |
| ಸದಸ್ಯರ ಹೆಸರು | ಶ್ರೀ ಎಫ್.ಹೆಚ್ ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ 50ನೇ ವಾರ್ಡ್‌ನಲ್ಲಿ ಬರುವ 'ಗಿರಣಿಚಾಳ್' ಪ್ರದೇಶವನ್ನು ಅಧಿಕೃತವಾಗಿ ಕೊಳಚೆ ಪ್ರದೇಶ (Slum) ಎಂದು ಘೋಷಿಸಲಾಗಿದೆಯೇ; ಹಾಗಿದ್ದಲ್ಲಿ ಘೋಷಣೆಯಾದ ದಿನಾಂಕ ಮತ್ತು ಈ ಕುರಿತ ಅಧಿಸೂಚನೆಯ ವಿವರಗಳನ್ನು ನೀಡುವುದು; | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ 50ನೇ ವಾರ್ಡ್‌ನಲ್ಲಿ ಬರುವ 'ಗಿರಣಿ ಚಾಳ್ ಎಂ.ಟಿ.ಎಸ್.ನಂ.108 & 108ಎ ರಲ್ಲಿ 7.77 ಎಕರೆ ವಿಸ್ತೀರ್ಣದಿಂದ ಕೂಡಿದ್ದು ಕೊಳಚೆ ಪ್ರದೇಶವೆಂದು ಅಧಿಸೂಚನೆ ಸಂಖ್ಯೆ HMA 316 MNI 76 ದಿನಾಂಕ:31-08-1976ರನ್ವಯ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. |
| ಆ) | ಪ್ರಸ್ತುತ ಈ ಗಿರಣಿ ಚಾಳ್ ಕೊಳಚೆ ಪ್ರದೇಶದಲ್ಲಿ ವಾಸವಾಗಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು; (ಸರ್ಕಾರ ನಡೆಸಿದ ಇತ್ತೀಚಿನ ಸಮೀಕ್ಷೆಯ ವರದಿಯೊಂದಿಗೆ ಮಾಹಿತಿ ನೀಡುವುದು); | ಮಂಡಳಿಯಿಂದ 2021ನೇ ಸಾಲಿನಲ್ಲಿ ಗಿರಣಿ ಚಾಳ್ ಕೊಳಚೆ ಪ್ರದೇಶದಲ್ಲಿ ಕುಟುಂಬಗಳ ಸಮೀಕ್ಷೆ ಮಾಡಲಾಗಿದ್ದು ಸಮೀಕ್ಷೆಯಂತೆ ಒಟ್ಟು 587 ಕುಟುಂಬಗಳು ವಾಸವಾಗಿರುತ್ತಾರೆ. |
| ಇ) | ಸದರಿ ಪ್ರದೇಶದ ನಿವಾಸಿಗಳಿಗೆ ಇದುವರೆಗೆ ಹಕ್ಕು ಪತ್ರ (Title Deeds) ವಿತರಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಹಕ್ಕು ಪತ್ರ ನೀಡಲು ಇರುವ ಕಾನೂನಾತ್ಮಕ ಅಡೆತಡೆಗಳೇನು ಮತ್ತು ಎಷ್ಟು ಕುಟುಂಬಗಳು ಹಕ್ಕು ಪತ್ರದಿಂದ ವಂಚಿತವಾಗಿವೆ: | ಸದರಿ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರವನ್ನು ವಿತರಿಸಿರುವುದಿಲ್ಲ.<br>ಸರ್ಕಾರದ ಆದೇಶ ಸಂ.ವಇ 88 ಎಸ್‌ಬಿಎಂ 2020 ದಿನಾಂಕ: 26-11-2020 ರನ್ವಯ ಸರ್ಕಾರಿ / ಸ್ಥಳೀಯ ಸಂಸ್ಥೆ ಮಾಲೀಕತ್ವದ ಘೋಷಿತ ಕೊಳಚೆ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ವಿತರಿಸುವಂತೆ ಆದೇಶಿಸಿದ್ದರನ್ವಯ, ಸದರಿ ಪ್ರದೇಶವನ್ನು ಹಕ್ಕುಪತ್ರ ವಿತರಿಸುವ ಸಂಬಂಧ ಮಂಡಳಿಗೆ ಹಸ್ತಾಂತರಿಸುವಂತೆ ಕರ್ನಾಟಕ ರಾಜ್ಯ ಜವಳಿ ನಿಗಮಕ್ಕೆ ವಿನಂತಿಸಲಾಗಿರುತ್ತದೆ. ಸದರಿ ಆಸ್ತಿಗಳ ಕುರಿತು ಸಿ.ಎ. (Company Application) ಸಂಖ್ಯೆ : 149/1998ರ ಪ್ರಕರಣದ ದಿನಾಂಕ:15-10-2004ರ ಆದೇಶದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು Official Liquidator ನೇಮಕ ಮಾಡಿ ಕರ್ನಾಟಕ ರಾಜ್ಯ ಜವಳಿ ಸಂಸ್ಥೆಯ Winding up ಕಾರ್ಯವನ್ನು ನಿರ್ವಹಿಸಲು ಆದೇಶಿಸಲಾಗಿದೆ.<br><br>ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಇವರು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಎಂ.ಎಸ್.ಎಂ.ಇ ಮತ್ತು ಗಣಿ) ಇವರಿಗೆ ವಿಳಾಸಿಸಿದ ಪತ್ರ ಸಂ.ಎಲ್‌ಎನ್‌ಡಿ/ಸಿಆರ್-238/2022-23 ದಿನಾಂಕ:05-06-2023ರಲ್ಲಿ Official Liquidator, High Court of Karnataka, Bangalore ಇವರು " You are requested that not to change the name in other properties which stands in the name of the company (in Liqn,) without the orders of the Hon'ble High Court of Karnataka" ಎಂದು ತಿಳಿಸಿರುವುದಾಗಿ, ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಿಂದ ಆದೇಶದ ಮೇಲೆ ನಿರ್ದೇಶನ ಸ್ವೀಕೃತವಾದಲ್ಲಿ ನಿರ್ದೇಶನಾನುಸಾರ ಕ್ರಮ ವಹಿಸಲಾಗುವುದೆಂದು ತಿಳಿಸಿರುತ್ತಾರೆ.<br><br>ಹೀಗೆ ಸದರಿ ಜಮೀನು ಮಂಡಳಿಗೆ ಹಸ್ತಾಂತರವಾಗುವಲ್ಲಿ ಕಾನೂನಾತ್ಮಕ |

| | | |
|---|---|---|
| | | ತೊಡಕು ಉಂಟಾಗಿದ್ದು, ಸಂಬಂಧಿಸಿದ ಇಲಾಖೆಯಿಂದ ಮಂಡಳಿಗೆ ಹಸ್ತಾಂತರವಾದಲ್ಲಿ ಸಮೀಕ್ಷೆ ಕೈಗೊಂಡು ಹಕ್ಕುಪತ್ರ ವಿತರಿಸಲು ಕ್ರಮ ವಹಿಸಲಾಗುವುದು. |
| ಈ) | ಈ ಕೊಳಚೆ ಪ್ರದೇಶದ ನಿವಾಸಿಗಳಿಗೆ ವಸತಿ ಯೋಜನೆ ಅಡಿಯಲ್ಲಿ ಸುಸಜ್ಜಿತ ಮನೆಗಳನ್ನು ನಿರ್ಮಿಸಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಯೋಜನೆಗೆ ಮೀಸಲಿಟ್ಟ ಅನುದಾನ ಮತ್ತು ಕಾಮಗಾರಿ ಆರಂಭಿಸುವ ಕಾಲಮಿತಿ ಏನು? | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ 50ನೇ ವಾರ್ಡ್‌ನಲ್ಲಿ ಬರುವ 'ಗಿರಣಿ ಚಾಳ್ ಕೊಳಚೆ ಪ್ರದೇಶಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ಮಾನ್ಯ ನ್ಯಾಯಾಲಯದ ಅಂತಿಮ ತೀರ್ಪಿನ ನಂತರ ನಿಯಮಾನುಸಾರ ಕ್ರಮ ವಹಿಸಲಾಗುವುದು. |

ಸಂಖ್ಯೆ: ವಇ 30 ಎಸ್‌ಬಿಎಂ 2026

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು